( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ಅಸಲು ದಾವೆ ನಂ.124/2009

**ದಿನಾಂಕಃ 01-06-2023, ಪಿ ಡಬ್ಲ್ಯೂ–1**

ಪಾಟೀ ಸವಾಲು ಃ ಶ್ರೀ ಆರ್ ಕೆ ಎಂ ವಕೀಲರಿಂದಃ

ಮುದ್ದನಹಳ್ಳಿ ಗ್ರಾಮದ 4 ಎಕರೆ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಕೊಣನೂರು ಗ್ರಾಮದ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಮೂಲತಃ ನನ್ನ ತಂದೆಯ ಊರು ವಿಜಿ ಕೊಪ್ಪಲು. ಸದರಿ ವಿಜಿ ಕೊಪ್ಪಲಿನಲ್ಲಿರುವ ನಿವೇಶನ ಹಾಗೂ ತೊಟ್ಟಿ ಮನೆಯ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ವಿಜಿ ಕೊಪ್ಪಲಿನಲ್ಲಿರುವ ಕೆಲವು ಆಸ್ತಿಗಳನ್ನು ಮಾರಾಟ ಮಾಡಿ ನನ್ನ ತಂದೆ ದಾವಾ ಸ್ವತ್ತುಗಳ ಪೈಕಿ ಕೆಲವು ಆಸ್ತಿಗಳನ್ನು ಖರೀದಿಸಿರುವ ಆಸ್ತಿಯ ನಂಬರ್ ನನಗೆ ಗೊತ್ತಿಲ್ಲ. ನನ್ನ ತಂದೆ ಅಂದಾಜು 3-4 ಎಕರೆ ಜಮೀನನ್ನು ಖರೀದಿಸಿದ್ದಾರೆ. ಸದರಿ ಜಮೀನಿಗೆ ಸಂಬಂದಪಟ್ಟ ದಾಖಲಾತಿಗಳು ನನ್ನ ಬಳಿ ಇವೆ, ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

ವಿಜಿ ಕೊಪ್ಪಲಿನಲ್ಲಿ ನನ್ನ ತಾಯಿಯ ಹೆಸರಿನಲ್ಲಿದ್ದ 2 ಎಕರೆ ಜಮೀನನ್ನು ಮಾರಾಟ ಮಾಡಿ ಲಕ್ಕನಹಳ್ಳಿ ಸರ್ವೆ ನಂಬರ್ 6 ರಲ್ಲಿ 2 ಎಕರೆ ಜಮೀನು ಖರೀದಿಸಿದ್ದಾರೆ. ಸದರಿ ಜಮೀನಿನ ಕ್ರಯಪತ್ರಗಳು ನನ್ನ ಬಳಿ ಇವೆ

ನನ್ನ ತಾತನ ಹೆಸರು ಮರೀಗೌಡ. ನನ್ನ ತಾತನಿಗೆ 4 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣುಮಕ್ಕಳು. ನನ್ನ ತಂದೆ ಹಿರಿಯ ಮಗ. ಉಳಿದವರು ನನಗೆ ಚಿಕ್ಕಪ್ಪಂದಿರು ಹಾಗೂ ಅತ್ತೆಯರಾಗಬೇಕು. ಅವರೆಲ್ಲರೂ ಮೃತಪಟ್ಟಿರುತ್ತಾರೆ. ಅವರ ಹೆಂಡತಿ ಮಕ್ಕಳು ಬದುಕಿದ್ದಾರೆ. ಒಬ್ಬ ಚಿಕ್ಕಪ್ಪನ ಮೂರು ಜನ ಮಕ್ಕಳು ಚನ್ನಕಲ್ಲು ಗ್ರಾಮದಲ್ಲಿ, ಇನ್ನೊಬ್ಬ ಚಿಕ್ಕಪ್ಪನ ಒಬ್ಬ ಮಗ ಕೊಣನೂರಿನಲ್ಲಿ, ಮತ್ತೊಬ್ಬ ಚಿಕ್ಕಪ್ಪನ ಒಬ್ಬ ಮಗ ಕೊಣನೂರಿನಲ್ಲಿ ವಾಸವಿದ್ದಾರೆ.

ವಿಜಿ ಕೊಪ್ಪಲಿನಲ್ಲಿ ಇದ್ದ ಆಸ್ತಿಗಳು ನನ್ನ ತಂದೆಗೆ ಹೇಗೆ ಬಂದಿತು ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳು ನನ್ನ ತಂದೆಗೆ ಹೇಗೆ ಬಂದವು ಎಂದು ತಿಳಿದುಕೊಳ್ಳಲು ನಾನು ಪ್ರಯತ್ನ ಪಟ್ಟಿಲ್ಲ, ಮುಂದುವರೆದು

ಸಾಕ್ಷಿಯು ಅವುಗಳು ನನ್ನ ತಾಯಿಗೆ ಬಂದಂತಹ ಆಸ್ತಿಗಳು ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳು ನನ್ನ ತಾಯಿಗೆ ಹೇಗೆ ಬಂದವು ಎಂದು ನನಗೆ ಗೊತಿಲ್ಲ. ನನ್ನ ತಾಯಿ ಊರು ಚಿಕ್ಕಹನಸೋಗೆ.

ವಿಜಿ ಕೊಪ್ಪಲಿನಲ್ಲಿ ನನ್ನ ತಾತನ ಆಸ್ತಿಗಳು ಈಗ ಇರುವುದಿಲ್ಲ. ನನ್ನ ತಾತನ ಆಸ್ತಿಗೆ ಸಂಬಂದಪಟ್ಟಂತೆ ನನ್ನ ಚಿಕ್ಕಪ್ಪಂದಿರಿಗೆ ಹಿಸ್ಸೆ ಹೋಗಿತ್ತು. ನನ್ನ ಚಿಕ್ಕಪ್ಪಂದಿರಿಗೆ ಯಾವ ಯಾವ ಆಸ್ತಿ ಎಷ್ಟು ಹಿಸ್ಸೆ ಹೋಗಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಕುಟುಂಬಕ್ಕೆ ಸಂಬಂದಪಟ್ಟಂತೆ ಲಕ್ಕನಹಳ್ಳಿ ಗ್ರಾಮದಲ್ಲಿ ಎಷ್ಟು ಜಮೀನುಗಳು ಇದೆ ಎಂದರೆ ಸಾಕ್ಷಿಯು ನಾನು ತಿಳಿದುಕೊಂಡು ಬರಬೇಕು ಎಂದು ನುಡಿಯುತ್ತಾರೆ. ನನ್ನ ಕುಟುಂಬಕ್ಕೆ ಸಂಬಂದಪಟ್ಟಂತೆ ಎರಡು ಬ್ಯಾರಲ್ ಮನೆಗಳು, ಒಂದು ವಾಸದ ಮನೆ ಮತ್ತು ಒಂದು ಮೆಶಿನ್ ಮನೆ ಇವೆ. ಒಂದು ಬ್ಯಾರಲ್ ಲೈಸೆನ್ಸ್ ಇದೆ. ಎರಡು ಬ್ಯಾರಲ್ ಮನೆಗಳು ಈಗಲೂ ನನ್ನ ತಂದೆಯ ಹೆಸರಿನಲ್ಲಿವೆ. ಸದರಿ ಎರಡು ಮನೆಗಳನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ರಘು ಎಂ.)
2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಅರಕಲಗೂಡು